# ರಾಮನಗರ ನಡೆದು ಬಂದ ಹಾದಿ

ಬ್ರಿಟಿಷರ ಆಳ್ವಿಕೆಯಲ್ಲಿ ಸರ್ ಬ್ಯಾರಿ ಕ್ಲೋಸ್ ಎಂಬಾತ ರಾಮನಗರಕ್ಕೆ ಬರುವುದಕ್ಕೆ ಹಿಂದೆ ಅರ್ಕಾವತಿ ನದಿಯ ದಂಡೆಯಲ್ಲಿ ರಾಮನಗರ ಒಂದು ಪುಟ್ಟ ಗ್ರಾಮವಾಗಿತ್ತು. ಬಹುಶಃ ಗ್ರಾಮದ ಪಕ್ಕದಲ್ಲಿ ರಾಮಗಿರಿ ಬೆಟ್ಟ ಇದ್ದುದರಿಂದ ಗ್ರಾಮಕ್ಕೆ "ಶಿವರಾಮಗಿರಿ" ಎಂದು ಹೆಸರಿತ್ತು ಎನ್ನಲಾಗಿದೆ.

ಮೈಸೂರು ಸಾಮ್ರಾಜ್ಯ ಐತಿಹಾಸಿಕ ನಾಲ್ಕನೆಯ ಯುದ್ಧ 1799ರಲ್ಲಿ ನಡೆದ ಸಂದರ್ಭದಲ್ಲಿ ಟಿಪ್ಪು ಸುಲ್ತಾನರು ಸಾವನ್ನಪ್ಪಿದ್ದರಿಂದ ಮೈಸೂರು ಸಾಮ್ರಾಜ್ಯದ ಸ್ವತಂತ್ರ ಅಸ್ತಿತ್ವ ಕೊನೆಗೊಂಡಿತು. ಬ್ರಿಟಿಷರು ಮೈಸೂರು ಸಾಮ್ರಾಜ್ಯದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದರು. ಈ ಸಮಯದಲ್ಲಿ ಪ್ರಸಿದ್ಧ ಬ್ರಿಟಿಷ್ ಅಧಿಕಾರಿ ಸರ್ ಬ್ಯಾರಿಕ್ಲೋಸ್ ಕೆಲ ದಿನಗಳ ಕಾಲ ರಾಮಗಿರಿಯಲ್ಲಿ ತಂಗಿದ್ದ ಕಾರಣ ಆತನ ಭೇಟಿಯ ನೆನಪಿನಲ್ಲಿ "ಕ್ಲೋಸ್ ಪೇಟೆ" ಎಂದು ನಗರಕ್ಕೆ ಹೆಸರಿಡಲಾಯಿತು ಎಂದು ಪೇಟೆ ಬೀದಿಯಲ್ಲಿರುವ ಶಾಸನದಲ್ಲಿ ಹೇಳಲಾಗಿದೆ.

ಸುಮಾರು 1800 ರಲ್ಲಿ ಬ್ಯಾರಿ ಕ್ಲೋಸ್ ಗೌರವಾರ್ಥ ಕ್ಲೋಸ್ ಪೇಟೆ ಎಂದು ಹೆಸರಿಸಲಾದ ಸ್ಥಳ, 1949ರಲ್ಲಿ ರಾಮನಗರ ಎಂಬ ಹೆಸರು ಪಡೆದುಕೊಂಡಿತು. ರಾಜ್ಯದ ರಾಜಧಾನಿ ಬೆಂಗಳೂರಿನಿಂದ 45 ಕಿ.ಮೀ ದೂರದಲ್ಲಿರುವ ರಾಮನಗರ ಸಮುದ್ರ ಮಟ್ಟದಿಂದ 2250 ಅಡಿ ಎತ್ತರದಲ್ಲಿದೆ. ಭಾರತದ ಭೂ ಪಟದಲ್ಲಿ 12.35' ಯಿಂದ 13.05' ಉತ್ತರ ಅಕ್ಷಾಂಶ ಮತ್ತು 77.00' ಯಿಂದ 77.60' ಪೂರ್ವ ರೇಖಾಂಶವನ್ನು ಹೊಂದಿದೆ.

ಭೂ ಭಾಗಕ್ಕಿಂತ ಹೆಚ್ಚಾಗಿ ಬೆಟ್ಟ ಗುಡ್ಡಗಳನ್ನೇ ಹೊಂದಿರುವುದು ರಾಮನಗರದ ವಿಶೇಷಗಳಲ್ಲಿ ಒಂದಾಗಿದೆ. ಕಂದು ಬಣ್ಣದ ಒರಟಾದ ಬೆಣಚುಕಲ್ಲಿನಿಂದ ಕೂಡಿದ ಬೆಟ್ಟಗಳ ಸಾಲು ಇಲ್ಲಿದ್ದು, ಇಲ್ಲಿ ಕಂಡು ಬರುವ ವಿಶಿಷ್ಟವಾದ ಗ್ರಾನೈಟ್ ಶಿಲಾ ಮಾದರಿಗೆ ಕ್ಲೋಸ್‌ಪೇಟೆ ಗ್ರಾನೈಟ್ ಎಂದೆ ವಿಶ್ವದಲ್ಲಿ ಹೆಸರಿದೆ.

ಇತಿಹಾಸದ ಪುಟಗಳಲ್ಲಿ ರಾಮನಗರ

**1800**ರಲ್ಲಿ ಬ್ರಿಟೀಷ್ ಅಧಿಕಾರಿ ಬ್ಯಾರಿ ಕ್ಲೋಸ್ ನೆನಪಿಗಾಗಿ 'ಕ್ಲೋಸ್ ಪೇಟೆ' ನಾಮಕರಣ.

**1801**ರಲ್ಲಿ ಖ್ಯಾತ ಆಂಗ್ಲ ಇತಿಹಾಸಕಾರ ಫ್ರಾನ್ಸಿಸ್ ಬುಕಾನಿನ್ ಪ್ರವಾಸ.

**1827**ರಲ್ಲಿ ಕ್ಲೋಸ್ ಪೇಟೆಗೆ ತಾಲ್ಲೂಕಿನ ಮಾನ್ಯತೆ.

**1884**ರಲ್ಲಿ ಕ್ಲೋಸ್ ಪೇಟೆಗೆ ಸಬ್ ಡಿವಿಷನ್ ಮಾನ್ಯತೆ ಇದರಿಂದ ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ಕ್ಲೋಸ್ ಪೇಟೆ ಅಧೀನಕ್ಕೆ.

**1893**ರಲ್ಲಿ ಮೋತಿ ನಗರದಲ್ಲಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಪ್ರಾರಂಭ.

**1927**ರಲ್ಲಿ ಮಹಾತ್ಮ ಗಾಂಧೀಜಿ ಭೇಟಿ.

**1928**ರಲ್ಲಿ ನಗರಕ್ಕೆ ವಿದ್ಯುತ್ ಸೌಲಭ್ಯ.

**1931**ರಲ್ಲಿ ನ್ಯಾಯಾಲಯ ಸ್ಥಾಪನೆ.

**1936**ರಲ್ಲಿ ಹೆಲ್ತ್ ಆಫೀಸ್ ಸ್ಥಾಪನೆ.

**1937**ರಲ್ಲಿ ಕೊಳಾಯಿ ಸೌಲಭ್ಯ.

**1956**ರಲ್ಲಿ ಅಸಿಸ್ಟೆಂಟ್ ಇಕ್ಸಿಕ್ಯೂಟೀವ್ ಇಂಜಿನಿಯರ್ ಕಛೇರಿ ಸ್ಥಾಪನೆ.

**1975**ರಲ್ಲಿ ಅಮಿತಾಬ್ ನಟಿಸಿದ ಶೋಲೆ ಚಿತ್ರೀಕರಣದ ಮೂಲಕ ರಾಮಘಡ್ ಎಂಬ ವಿಶ್ವಖ್ಯಾತಿ

**27**ರ ಆ.**2007** ರಾಜ್ಯದ **28**ನೇ ನೂತನ ಜಿಲ್ಲೆಯಾಗಿ ಭೂ ಪಟಕ್ಕೆ ಸೇರ್ಪಡೆ.

ಮಾಹಿತಿ ಸಂಗ್ರಹಿಸಿದವರು :- ರಾಮನಗರ ವಾರ್ತೆ

# HISTORY OF RAMANAGARA

Ramanagara was a small village on the Banks of River Arkavati before the British; under Sir Barry Close came to Ramanagara. Due to the presence of Ramagiri Hill adjacent to the village, the village was also called as “SHIVARAMAGIRI”.

After the death of Tippu Sultan, in the historic fourth Mysore war during the year 1799, the hold of the Mysore dynasty was lost and the British were in complete control of the Mysore dynasty. During this time the famous British Officer Sir Barry Close stayed in the hills of Ramagiri for some time. In remembrance of his visit to the Ramagiri Hills, the city was named as “CLOSEPET” as a token of gesture and this has been carved on one of the stones in the Closepet Street. Even today we can see this stone on the street.

In the year 1800, Ramagiri village was named as “CLOSEPET” to honour the British Officer Sir Barry Close. In 1949, it has been named as “RAMANAGARA”. Ramanagara has more hillocks than land area and all these hills are brownish soft granite stones. Because of this type of special granites available here, these granite stones are famous the world over as “CLOSEPET GRANITES”.

**Various events in the history of Ramanagara:-**

| Sl No. | Year | Events |
|---|---|---|
| 01. | 1800 | In remembrance of British Officer Sir Barry Close, it was named as “CLOSEPET” |
| 02. | 1801 | Famous English Historian Francis Bukanin visited Ramanagara |
| 03. | 1827 | Taluk status given to Closepet |
| 04. | 1884 | Sub-division status to Closepet and Channapatna, Kanakapura and Magadi come under the jurisdiction of Closepet |
| 05. | 1893 | Government General Hospital was started in Motinagar |
| 06. | 1927 | Mahatma Gandhiji visited Ramanagara |
| 07. | 1928 | Electricity was made available to the Town |
| 08. | 1931 | District Court was established |
| 09. | 1936 | Health Office was established |
| 10. | 1937 | Water facility was made available to the citizens |
| 11. | 1956 | Assistant Executive Engineer’s Office was established |
| 12. | 1975 | The place became world famous as “Ramghad” after the shooting of movie “SHOLAY” |
| 13. | 27-10-2007 | Included in the Karnataka State Map as the 28$^{th}$ District |

**(Compiled by Ramanagara Varthe, News Paper)**